## ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 832/ 2018**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ಮಹಾದೇವಪ್ಪ | ಫ್ರಾಸಾಃ 01 |
| ತಂದೆ ಹೆಸರುಃ | ಸಂಗಪ್ಪ | ಚಾಸಾಃ 05 |
| ವಯಸ್ಸುಃ | 63 ವರ್ಷ | ದಿಃ 23-07-2025 |
| ಉದ್ಯೋಗಃ | ನಿವೃತ್ತ ಮುಖ್ಯ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಯಾದಗಿರಿ | |

ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು 2017 ರಿಂದ 2019 ವರೆಗೆ ಯಾದಗಿರಿ ಗ್ರಾಮಂತರ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಸೇವೆ ಸಲ್ಲಿಸಿದ್ದೇನೆ.

ನಾನು ಹಾಗೂ ಚಾಸಾಃ 3 ಮತ್ತು 4 ರವರು ಗುರುಮಠಕಲಿನ ವಿಧಾನ ಸಭೆ ಕ್ಷೇತ್ರ Flying squad ಸದಸ್ಯರಾಗಿದ್ದು ದಿನಾಂಕ 25.04.2018 ರಂದು ಅಲ್ಲಿಪೂರ ತಾಂಡಾದಲ್ಲಿ ಅಕ್ರಮ ಮಧ್ಯ ಮಾರಾಟ ನಡೆದಿರುವ ಬಗ್ಗೆ ಮಾಹಿತಿ ಬಂದಾಗ ಪರಿಶೀಲನೆಗೆ ಹೋಗಿದ್ದೆವು. ನಾನು ಹಾಗೂ ಚಾಸಾಃ 3 ಮತ್ತು 4 ರವರು ಅಲ್ಲಿಪೂರ ತಾಂಡಕ್ಕೆ ಹೋಗಿದ್ದೆವು. ಅಲ್ಲಿ ಇಬ್ಬರು ಪಂಚರನ್ನು ಕರೆಸಿಕೊಂಡಿದ್ದೆವು. ಅಲ್ಲಿ ಆರೋಪಿಯ ಕಿರಾಣಿ ಅಂಗಡಿಯನ್ನು ಪರಿಶೀಲನೆ ಮಾಡಿದಾಗ 180 ಮಿಲಿ ಪ್ರಮಾಣದ ಐಬಿ ವಿಸ್ಕಿಯ 04, ಎಂಸಿ ವಿಸ್ಕಿಯ 07, ಒ.ಟಿ ವಿಸ್ಕಿಯ 06 ಹಾಗೂ ಒ.ಸಿ ವಿಸ್ಕಿಯ 01 ಬಾಟಲಿ ಮತ್ತು 90 ಮಿಲಿ ಪ್ರಮಾಣದ ಒ.ಸಿ ವಿಸ್ಕಿಯ 22 ಬಾಟಲಿಗಳು ಸಿಕ್ಕಿರುತ್ತವೆ. ನಾವು ಆ ನಂತರ ಹೊರಗೆ ಬಂದು ವಿಚಾರಿಸಲಾಗಿ ಸದರಿ ಅಂಗಡಿ ಆರೋಪಿ ರೇಣುಕಾಬಾಯಿ ಗಂಡ ಲಕ್ಷ್ಮಣ ರಾಠೋಡ ರವರಿಗೆ ಸೇರಿದ್ದು ಆಗಿರುತ್ತದೆ ಎಂದು ತಿಳಿದು ಬಂದಿರುತ್ತದೆ. ಬೆಃ 10.00 ರಿಂದ 11.00 ಗಂಟೆ ವರೆಗೆ ಸ್ಥಳದಲ್ಲಿ ಪಂಚನಾಮೆ ಮಾಡಿದ್ದೆವು. ನಂತರ ಯಾದಗಿರಿಯ DCEIB ಕಚೇರಿಗೆ ಬಂದು ಮು.ಮಾಲು ಒಪ್ಪಿ ಸಿದ್ದೆವು. ಆ ನಂತರ ಅಬಕಾರಿ ಅಧಿಕಾರಿಗಳು ನಮ್ಮ ಮತ್ತು ಪಂಚರ ಸಮಕ್ಷಮ ರಾಸಾಯನಿಕ ಪರೀಕ್ಷೆಗೆ ಮಾದರಿ ಬಾಟಲಿಗಳನ್ನು ತೆಗೆದುಕೊಂಡಿದ್ದರು. ನಮ್ಮ ಮತ್ತು ಪಂಚರ ಸಹಿಯುಳ್ಳ ಚೀಟಿಗಳನ್ನು ಮಾದರಿ ಬಾಟಲಿಗಳಿಗೆ ಅಂಟಿಸಿದ್ದರು. ನಂತರ ಅಬಕಾರಿ ತನಿಖಾಧಿಕಾರಿ ನನ್ನ ಹೇಳಿಕೆ ಪಡೆದುಕೊಂಡಿದ್ದರು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದು ಮದ್ಯದ ಖಾಲಿ ಪಾಕೇಟ್ ಹಾಗೂ ಎರಡು ಖಾಲಿ ಬಾಟಲಿಗಳನ್ನು ನೋಡಿ ಅವುಗಳು ಮಾದರಿ ಪ್ಯಾಕೆಟು ಹಾಗೂ ಬಾಟಲಿಗಳು ಆಗಿರುತ್ತವೆ ಎಂದು ನುಡಿದಿದ್ದು, ಸವುಗಳನ್ನು ಕ್ರಮವಾಗಿ ಮು.ಮಾ 1 ರಿಂದ 3 ಎಂದು ಗುರುತಿಸಲಾಯಿತು.

ಸಾಕ್ಷಿಯು ಪಂಚನಾಮೆಯಲ್ಲಿನ ತಮ್ಮ ಸಹಿಯನ್ನು ಈಗ ನೋಡಿ ಗುರುತಿಸಿದ್ದು, ಪಂಚನಾಮೆಯನ್ನು ನಿಪಿ-1 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಎಂ ಎಂ ಈ ವಕೀಲರಿಂದಃ</u>

ಬೆಃ 09.00 ಗಂಟೆಗೆ ಚಾಸಾಃ 3 ರವರಿಗೆ ಮಾಹಿತಿ ಬಂದಿತ್ತು. ಮಾಹಿತಿ ಬಂದಾಗ ನಾವುಗಳು ಗಸ್ತು ಕರ್ತವ್ಯದಲ್ಲಿ ಇದ್ದೆವು. ಮಾಹಿತಿ ಬಂದಾಗ ಯಾದಗಿರಿ ನಗರದಲ್ಲಿ ಇದ್ದೆವು. ಮಾಹಿತಿ ಬಂದ ತಕ್ಷಣ ಅಲ್ಲಿಪುರ ತಾಂಡಾಕ್ಕೆ ಹೋಗಿದ್ದೆವು. ಬೆಃ 09.30 ಗಂಟೆ ಸುಮಾರಿಗೆ ಅಲ್ಲಿಪೂರ ತಾಂಡಾಕ್ಕೆ ತಲುಪಿದ್ದೆವು. ಅಲ್ಲಿಪೂರ ತಾಂಡಾದಲ್ಲಿಯೇ ಪಂಚರನ್ನು ಬರಮಾಡಿಕೊಂಡಿದ್ದೆವು.

ಆರೋಪಿಯ ಅಂಗಡಿಯ ಪಂಚಾಯತಿ ನಂಬರು ನನಗೆ ಗೊತ್ತಿಲ್ಲ. ಅಂಗಡಿಯ ಬಾಕ್ಸ್ ನಲ್ಲಿ ಮದ್ಯದ ಮದ್ಯದ ಪಾಕೆಟು ಮತ್ತು ಬಾಟಲಿಗಳು ಇದ್ದವು. ಬಾಕ್ಸ್ ನಲ್ಲಿ ಇದ್ದವು ಎಂಬುದನ್ನು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಅಂಗಡಿಯಲ್ಲಿ ದೊರೆತ ಮದ್ಯದ ಪ್ಯಾಕೆಟು ಹಾಗೂ ಬಾಟಲಿಗಳು ಬಾಚ್ ನಂಬರು ನನಗೆ ಗೊತ್ತಿಲ್ಲ. ನಾವು ಸ್ಥಳದಲ್ಲಿ ಮಾದರಿ ತೆಗೆದುಕೊಂಡಿಲ್ಲ.

ನಾನು Flying squad ತಂಡದ ಸದಸ್ಯನಾಗಿರಲ್ಲಿಲ್ಲ, ನಾವು ಯಾವುದೇ ದಾಳಿ ಮಾಡಿಲ್ಲ, ಸ್ಥಳದಲ್ಲಿ ಯಾವೂದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಸ್ತು ಜಪ್ತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖಾ ಅಂಕಿ-ಅಂಶಗಳಿಗೊಸ್ಕರ ಸುಳ್ಳು ಪ್ರಕರಣ ದಾಖಲಿಸಿಕೊಂಡಿದ್ದೇವೆಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ